

بسم اللهِ الرَّحمٰنِ الرَّحیم

# ಪ್ರವಾದಿ ಚರಿತ್ರೆ – ಉಹದ್ ಯುದ್ಧಕ್ಕೆ ಕಾರಣವಾದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–12–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್[ಸ]ರ ಯುದ್ಧಗಳಿಗೆ ಸಂಬಂಧಿಸಿ ಕೆಲವು ಸಂಗತಿಗಳನ್ನು ಹೇಳುವೆನು. ಹಝ್ರತ್ ಪೈಗಂಬರ್[ಸ]ರ ವ್ಯಕ್ತಿತ್ವದ ಮಗ್ಗುಲುಗಳು ಮತ್ತು ಅವರ ಮಾದರಿ ಈ ಸ್ಥಿತಿಗಳಲ್ಲಿ ನಮಗೆ ಹೇಗೆ ಕಂಡುಬರುತ್ತಿದೆ ಎಂಬುದನ್ನು ತಿಳಿಸುತ್ತೇನೆ. ಹಝ್ರತ್ ಪೈಗಂಬರ್[ಸ] ಕೈದಿಗಳಿಗೆ ಹೇಗೆ ಸೌಲಭ್ಯಗಳನ್ನು ಒದಗಿಸಿದ್ದರು ಎಂಬುದನ್ನು ಬದ್ರ್ ಯುದ್ಧಕ್ಕೆ ಸಂಬಂಧಿಸಿ ನಾವು ನೋಡಿದ್ದೇವೆ. ಹಝ್ರತ್ ಪೈಗಂಬರ್[ಸ]ರ ನಿರ್ದೇಶನ ಪ್ರಕಾರ ಸಹಾಬಿಯರು ಅವರು ಸ್ವತಃ ಸೇವಿಸುವ ಆಹಾರಕ್ಕಿಂತ ಉತ್ತಮವಾದ ಆಹಾರವನ್ನು ನಮಗೆ ಕೊಡುತ್ತಿದ್ದರು ಎಂದು ಕೈದಿಗಳು ಸ್ವತಃ ಹೇಳಿದ್ದರು. ಅನಂತರ ಹಝ್ರತ್ ಪೈಗಂಬರ್[ಸ] ಬಹಳ ಲಘುವಾದ ನಿಬಂಧನೆಗಳೊಂದಿಗೆ ಆ ಕೈದಿಗಳನ್ನು ಬಿಡುಗಡೆಗೊಳಿಸಿದ್ದರು. ವಿದ್ಯಾವಂತರಾಗಿರುವವರು ಮುಸ್ಲಿಮರಿಗೆ ಓದುಬರಹ ಕಲಿಸಬೇಕು ಎಂದು ಮಾತ್ರವಾಗಿತ್ತು ಕೆಲವರಿಗೆ ವಿಧಿಸಲಾದ ಪರಿಹಾರಧನ.

ಹಝ್ರತ್ ಪೈಗಂಬರ್[ಸ]ರಿಗೆ ಯಾರೊಂದಿಗೂ ವೈಯಕ್ತಿಕ ಶತ್ರುತ್ವ ಇರಲಿಲ್ಲ. ಬದಲಿಗೆ ಯುದ್ಧವು ಅಲ್ಲಾಹನ ದೀನನ್ನು ಅಳಿಸಿ ಹಾಕಲು ಪ್ರಯತ್ನಿಸುವವರ ವಿರುದ್ಧವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಕೆಲವು ಜನರು ತಮ್ಮ ನಿರ್ಬಂಧಗಳ ಕಾರಣದಿಂದ ಯುದ್ಧದಲ್ಲಿ ಭಾಗಿಯಾಗುತ್ತಿದ್ದರು. ಅವರಲ್ಲಿ ಕೆಲವರು ಇಸ್ಲಾಂ ಸ್ವೀಕರಿಸಿದರು. ಹಝ್ರತ್ ಪೈಗಂಬರ್[ಸ] ಯುದ್ಧ ನಿಬಂಧನೆಗಳನ್ನು ಮತ್ತು ಕಾನೂನುಗಳನ್ನು ನಿಶ್ಚಯಿಸಿದ್ದರು, ಒಪ್ಪಂದಗಳಿಗೆ ಬೆಲೆ ನೀಡಿದ್ದರು ಮತ್ತು ಅವುಗಳ ಪ್ರಕಾರ ಅತ್ಯುತ್ತಮವಾಗಿ ನಡೆದರು. ಇಂದಿನ ಲೋಕದ ಹಾಗೆ ಅನೇಕ ನಿಬಂಧನೆಗಳನ್ನು ಮತ್ತು ಕಾನೂನುಗಳನ್ನು ಮಾಡಿಕೊಂಡು ಅದರ ಪ್ರಕಾರ ನಡೆಯದೇ ದ್ವಿಮುಖ ಧೋರಣೆ ತೋರಿಸುತ್ತಿರಲಿಲ್ಲ.

ಹಝ್ರತ್ ಪೈಗಂಬರ್[ಸ]ರ ಜೀವನವು ನ್ಯಾಯಪಾಲನೆ, ನೀತಿ ಮತ್ತು ಶಾಂತಿಸ್ಥಾಪನೆಯ ಮೂಲತತ್ವಗಳ ಬಗ್ಗೆ ಪವಿತ್ರ ಖುರ್‌ಆನಿನ ಆಜ್ಞೆಗಳ ಕ್ರಿಯಾರೂಪದ ವ್ಯಾಖ್ಯಾನವಾಗಿತ್ತು. ಅಲ್ಲಾಹನು ಒಂದೆಡೆ ಹೇಳುತ್ತಾನೆ:

يٰٓأَيُّهَا الَّذِيْنَ اٰمَنُوْا كُوْنُوْا قَوّٰمِيْنَ لِلّٰهِ شُهَدَآءَ بِالْقِسْطِ وَلَا يَجْرِمَنَّكُمْ شَنَاٰنُ قَوْمٍ

عَلٰٓى أَلَّا تَعْدِلُوْا اِعْدِلُوْا هُوَ أَقْرَبُ لِلتَّقْوٰى وَاتَّقُوا اللّٰهَ إِنَّ اللّٰهَ خَبِيْرٌۢ بِمَا تَعْمَلُوْنَ ○

ಅರ್ಥ: ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ.

ಒಟ್ಟಿನಲ್ಲಿ ಹಝ್ರತ್ ಪೈಗಂಬರ್[ಸ]ರ ಮಾದರಿ ಈ ಬೋಧನೆಯ ಬೆಳಕಿನಲ್ಲಿ ಎಲ್ಲ ರೀತಿಯಲ್ಲೂ ಉತ್ತಮವಾಗಿತ್ತು ಮತ್ತು ಅದರ ಉನ್ನತ ಮಟ್ಟವನ್ನು ನೆಲೆನಿಲ್ಲಿಸುವಂಥದ್ದಾಗಿತ್ತು.

ಇಂದು ಉಹದ್ ಯುದ್ಧಕ್ಕೆ ಸಂಬಂಧಿಸಿ ಕೆಲವನ್ನು ವಿವರಿಸುತ್ತೇನೆ. ಈ ಯುದ್ಧವನ್ನು ಕೂಡ ಶತ್ರುಗಳು ತಮ್ಮ ವೈರದ ಬೆಂಕಿಯ ಕಾರಣದಿಂದ ಆರಂಭಿಸಿದ್ದರು ಮತ್ತು ನಿರ್ಬಂಧಿತ ಸ್ಥಿತಿಯಲ್ಲಿ ಮುಸ್ಲಿಮರಿಗೂ ಯುದ್ಧಕ್ಕಾಗಿ ಹೊರಡಬೇಕಾಗಿ ಬಂತು ಎಂದು ಘಟನೆಗಳಿಂದ ಸಾಬೀತಾಗುತ್ತದೆ. ಈ ಯುದ್ಧವು ಬದ್ರ್ ಯುದ್ಧದ ಒಂದು ವರ್ಷದ ನಂತರ ಹಿಜರೀ 3, ಶವ್ವಾಲ್ ತಿಂಗಳಲ್ಲಿ ಶನಿವಾರದಂದು ನಡೆದಿತ್ತು.

ಉಹದ್ ಯುದ್ಧವು ಹಿಜರೀ 3ರಲ್ಲಿ ನಡೆದಿತ್ತು ಎಂಬುದರಲ್ಲಿ ಹೆಚ್ಚಿನ ಎಲ್ಲ ಚರಿತ್ರೆಗಾರರು ಒಮ್ಮತಾಭಿಪ್ರಾಯವನ್ನು ಹೊಂದಿರುವರು. ಆದರೆ ಹಿಜರೀ 4ರಲ್ಲಿ ನಡೆದಿತ್ತು ಎಂಬ ಒಂದು ಹೇಳಿಕೆ ಕೂಡ ಇದೆ. ಹೆಚ್ಚಾಗಿ ಶವ್ವಾಲ್ 7 ಮತ್ತು 15ರಲ್ಲಿ ನಡೆದಿತ್ತು ಎಂದೂ ಪ್ರಸ್ತಾಪಿಸಲಾಗುತ್ತದೆ.

ಹಝ್ರತ್ ಪೈಗಂಬರ್[ಸ] ಮದೀನದಿಂದ ಜುಮುಅದಂದು ಅಸರ್ ನಮಾಝಿನ ನಂತರ ಹೊರಟರು ಮತ್ತು ಶನಿವಾರದಂದು ಸೂರ್ಯೋದಯಕ್ಕೆ ಮುಂಚೆ ಉಹದ್ ಮೈದಾನಕ್ಕೆ ತಲುಪಿದರು.

ಹಿಜರೀ 3, ಶವ್ವಾಲ್ 15 ಎಂದರೆ, ಕ್ರಿ.ಶ. 624ರಲ್ಲಿ ಮಾರ್ಚ್ 31, ಶನಿವಾರದಂದು ಉಹದ್ ಯುದ್ಧ ನಡೆದಿತ್ತು ಎಂದು ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ಬರೆದಿರುವರು.

ಈ ಯುದ್ಧ ನಡೆಯಲು ಕಾರಣವೇನೆಂದರೆ, ಬದ್ರ್ ಯುದ್ಧದಲ್ಲಿ ಖುರೈಶಿಯರಿಗೆ ಹೀನಾಯ ಸೋಲು ಉಂಟಾದಾಗ ಖುರೈಶಿನ ಸರದಾರರಾದ ಅಬ್ದುಲ್ಲಾಹ್ ಬಿನ್ ಉಬಯ್ಯ್ ರಬೀಅ, ಇಕ್ರಿಮ ಬಿನ್ ಅಬೂಜಹಲ್, ಸಫ್‌ವಾನ್ ಬಿನ್ ಉಮಯ್ಯ ಮುಂತಾದವರು ಅಬೂಸುಫ್‌ಯಾನಿನ ಬಳಿಗೆ ಹೋದರು. ಬದ್ರ್ ಯುದ್ಧಕ್ಕೆ ಕಾರಣವಾದ ವ್ಯಾಪಾರ ತಂಡದಲ್ಲಿ ಈ ಸರದಾರರ ಸಂಪತ್ತು ಇತ್ತು. ಈ ಸಂಪತ್ತನ್ನು ಮಕ್ಕದ ದಾರುನ್ನದ್‌ವದಲ್ಲಿ ಇರಿಸಲಾಗಿತ್ತು. ಈ ಸರದಾರರು ಅಬೂಸುಫ್‌ಯಾನ್‌ನೊಡನೆ ಹೇಳಿದರು: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನಮ್ಮ

ಜನರನ್ನು ವಧಿಸಿದ್ದಾರೆ. ಆದ್ದರಿಂದ ಈ ವ್ಯಾಪಾರದ ಸಂಪತ್ತಿನಿಂದ ಅವರೊಂದಿಗೆ ಯುದ್ಧದ ತಯಾರಿ ಮಾಡಿರಿ. ವಧಿಸಲ್ಪಟ್ಟವರ ಪರವಾಗಿ ಸೇಡು ತೀರಿಸಲು ನಮಗೆ ಸಾಧ್ಯವಾಗಬಹುದು. ಈ ವ್ಯಾಪಾರದ ಸಂಪತ್ತಿನಿಂದ ಉಂಟಾಗುವ ಲಾಭದಿಂದ ಒಂದು ಸೈನ್ಯವನ್ನು ತಯಾರಿಸಲು ನಾವು ಸಂತೋಷದಿಂದ ಸಿದ್ಧರಾಗಿದ್ದೇವೆ. ಅವರ ಈ ಸಲಹೆಯನ್ನು ಒಪ್ಪಲಾಯಿತು.

ಖುರೈಶಿಯರು ಸಂಪತ್ತಿನಿಂದ 25 ಸಾವಿರ ದಿನಾರಿನ ಲಾಭವನ್ನು ಯುದ್ಧಕ್ಕಾಗಿ ಬೇರ್ಪಡಿಸಿಕೊಂಡು ಮೂಲಧನವನ್ನು ಮಾಲಿಕರಿಗೆ ಕೊಟ್ಟರು.

ಈ ಸಾಮಾನ್ಯ ಕಾರಣವಲ್ಲದೇ, ಬೇರೆ ಕೆಲವು ವಿಷಯಗಳನ್ನು ಸಹ ಈ ಯುದ್ಧಕ್ಕೆ ಕಾರಣಗಳೆಂದು ಹೇಳಬಹುದಾಗಿದೆ. ಬದ್ರ್ ಯುದ್ಧದ ನಂತರ ಮಕ್ಕಾ ನಿವಾಸಿಗಳಿಗೆ ಸಿರಿಯಾಗೆ ಹೋಗುವುದು ಅಸಾಧ್ಯವಾಗಿತ್ತು. ಏಕೆಂದರೆ ಮಕ್ಕಾದ ವ್ಯಾಪಾರ ತಂಡಗಳಿಗೆ ಮದೀನದ ಆಸುಪಾಸಿನ ಗ್ರಾಮಗಳಿಂದ ದಾಟಬೇಕಾಗಿತ್ತು. ತಮ್ಮ ಹಿಂದಿನ ದೌರ್ಜನ್ಯ ಮತ್ತು ಪೀಡನೆಗಳ ಕಾರಣದಿಂದ ಖುರೈಶಿಗಳಿಗೆ ಅಲ್ಲಿಂದ ದಾಟಿ ಹೋಗುವುದು ಕಷ್ಟದಾಯಕವಾಗುತ್ತಾ ಹೋಗುತ್ತಿತ್ತು. ಯುದ್ಧಗಳಲ್ಲಿ ಮತ್ತು ಕಾರ್ಯಾಚರಣೆಗಳಲ್ಲಿ ಸೋಲು, ಬದ್ರ್ ಯುದ್ಧದಲ್ಲಿ ಖುರೈಶೀ ಸರದಾರರ ವಧೆ ಮತ್ತು ಎಪ್ಪತ್ತು ಮುಶ್ರಿಕರ ಬಂಧನದಂತಹ ವಿಷಯಗಳು ಅವರ ಪ್ರಸಿದ್ಧಿ ಮತ್ತು ಸಾಮಾಜಿಕ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಬೀರಿತ್ತು. ಅವರ ಖ್ಯಾತಿಯನ್ನು ನೆಲೆನಿಲ್ಲಿಸಲಿಕ್ಕಾಗಿ ಅವರು ಸೇಡು ತೀರಿಸಲು ಬಯಸುತ್ತಿದ್ದರು. ಒಬ್ಬ ಲೇಖಕ ಯುದ್ಧದ ಕಾರಣದ ಬಗ್ಗೆ ಹೀಗೆ ಬರೆದಿರುವರು: ಖುರೈಶಿಗಳಿಗೆ ಕೆಲವು ಕಾರ್ಯಾಚರಣೆಗಳಲ್ಲಿ ಪರಾಜಯ ಉಂಟಾಯಿತು. ಅದರ ಕಾರಣದಿಂದ ಅವರಲ್ಲಿ ದುಃಖ ಮತ್ತು ಪ್ರತೀಕಾರದ ಆವೇಶ ಬಹಳವಾಗಿ ಉಂಟಾಗಿತ್ತು. ಹೇಗಿದ್ದರೂ ಇದಲ್ಲದೇ ಇತರ ಅನೇಕ ಕಾರಣಗಳಿಂದ ಖುರೈಶಿಯರು ಯುದ್ಧದ ತಯಾರಿ ಮಾಡುತ್ತಿದ್ದರು. ಲಾಲಸೆ ತೋರಿಸಿ, ಅಭಿಮಾನ ಉಂಟುಮಾಡಿಸಿ ಆಸುಪಾಸಿನ ಗೋತ್ರಗಳನ್ನು ಅವರು ತಮ್ಮ ಜೊತೆ ಸೇರಿಸಿದರು.

ಹಝ್ರತ್ ಅಬ್ಬಾಸ್(ರ)ರ ಒಂದು ಪತ್ರದ ಮೂಲಕ ಹಝ್ರತ್ ಪೈಗಂಬರ್(ಸ)ರಿಗೆ ಸತ್ಯನಿಷೇಧಿಗಳ ತಯಾರಿಯ ಮಾಹಿತಿ ಲಭಿಸಿತು. ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ)ರಿಗೆ ಯಾವುದೇ ಒಳ್ಳೆಯ ವಾರ್ತೆ ಲಭಿಸಿಲ್ಲವೆಂಬ ವದಂತಿಯನ್ನು ಯಹೂದಿಯರು ಮತ್ತು ಕಪಟವಿಶ್ವಾಸಿಗಳು ಹರಡಿದರು. ಅವರು ಈ ಸುದ್ದಿಯನ್ನು ರಂಗೇರಿಸಿ ಎಲ್ಲೆಡೆ ಹರಡಿ ಮುಸ್ಲಿಮರನ್ನು ಗಾಬರಿಗೊಳಿಸಲು ಪ್ರಯತ್ನಿಸಿದರು. ಇದರಿಂದ ಪ್ರತಿಯೊಬ್ಬರು ಜಾಗರೂಕರಾದರು. ಮಕ್ಕಾದ ಮುಶ್ರಿಕರು ಯುದ್ಧಕ್ಕಾಗಿ ಬರುತ್ತಿದ್ದಾರೆ ಎಂಬ ಗದ್ದಲವೆದ್ದಿತ್ತು.

ಹಿಜರೀ 3, ರಮಝಾನ್ ಮಾಸದ ಕೊನೆಯಲ್ಲಿ ಅಥವಾ ಶವ್ವಾಲಿನ ಆರಂಭದಲ್ಲಿ ಖುರೈಶಿನ ಸೈನ್ಯ ಮಕ್ಕದಿಂದ ಹೊರಟಿತು. ಅವರ ಸಂಖ್ಯೆ ಮೂರು ಸಾವಿರವಾಗಿತ್ತು. ಅದರಲ್ಲಿ ಏಳು ನೂರು ಸೈನಿಕರು, ಇನ್ನೂರು ಕುದುರೆಗಳು ಮತ್ತು ಮೂರು ಸಾವಿರ ಒಂಟೆಗಳು ಇದ್ದುವು.

15 ಮಹಿಳೆಯರು ಕೂಡ ಜೊತೆಗೆ ಇದ್ದರು. ಅವರಲ್ಲಿ ಅಬೂಸುಫ್‌ಯಾನ್, ಇಕ್ರಿಮ ಬಿನ್ ಅಬೂಜಹಲ್, ಸಫ್‌ವಾನ್ ಬಿನ್ ಉಮಯ್ಯ, ಖಾಲಿದ್ ಬಿನ್ ವಲೀದ್ ಮತ್ತು ಅಮ್ರ್ ಬಿನ್ ಆಸ್‌ರ ಪತ್ನಿಯಂದಿರು ಕೂಡ ಸೇರಿದ್ದರು.

ಹಝ್ರತ್ ಅಬ್ಬಾಸ್(ರ) ಖುರೈಶಿಯರ ಸೈನ್ಯದ ಕುರಿತು ಹಝ್ರತ್ ಪೈಗಂಬರ್(ಸ)ರಿಗೆ ವಿವರಗಳನ್ನು ಒದಗಿಸಿದರು ಮತ್ತು ಅಮ್ರ್ ಬಿನ್ ಸಾಲಿಂ ಹಝ್ರತ್ ಪೈಗಂಬರ್(ಸ)ರಿಗೆ ಮಕ್ಕಾದ ಮುಶ್ರಿಕರ ರವಾನೆಯ ಬಗ್ಗೆ ಸುದ್ದಿ ತಲುಪಿಸಿದರು. ಇದರ ಬಗ್ಗೆ ಅಬೂಸುಫ್‌ಯಾನಿಗೆ ಗೊತ್ತಾದಾಗ ತಬ್ಬಿಬ್ಬಾದನು. ಸಫ್‌ವಾನ್ ಬಿನ್ ಉಮಯ್ಯ ಹೇಳಿದನು: ನಮ್ಮ ಸಂಖ್ಯೆ ಹೆಚ್ಚಿದೆ, ಯುದ್ಧ ಸಾಮಾನುಗಳು ಹೆಚ್ಚಿವೆ, ಅವರಿಗೆ ಜೀವಹಾನಿ ಮತ್ತು ಧನ ನಷ್ಟ ಉಂಟುಮಾಡಲು ನಮಗೆ ಶಕ್ತಿಯಿದೆ. ಆದರೆ ಅವರಿಗೆ ಅದರ ಸಾಮರ್ಥ್ಯವಿಲ್ಲ.

ಅಬೂಸುಫ್‌ಯಾನಿನ ಪತ್ನಿ ಹಿಂದ ಹೇಳಿದಳು: ನೀವು ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ತಾಯಿಯ ಖಬರನ್ನು ಅಗೆಯಿರಿ ಮತ್ತು ಅವರ ಮೃತದೇಹವನ್ನು ತಮ್ಮ ಬಳಿ ಇರಿಸಿರಿ ಹಾಗೂ ನಮ್ಮಲ್ಲಿ ಬಂಧಿತರಾಗುವ ಪ್ರತಿಯೊಬ್ಬರ ಬಿಡುಗಡೆಗಾಗಿ ಅವರ ತಾಯಿಯ ಒಂದು ಅವಯವವನ್ನು ನೀಡೋಣ. ಆದರೆ ಖುರೈಶರು ಅದನ್ನು ಒಪ್ಪಲಿಲ್ಲ. ಹಾಗೆ ಮಾಡಿದರೆ ಅವರು ನಮ್ಮವರ ಖಬರನ್ನು ಅಗೆಯುವರು ಎಂದು ಹೇಳಿದರು. ಆ ಸೈನ್ಯದ ಮಹಿಳೆಯರು ಸೇಡಿನ ಆವೇಶವನ್ನು ವರ್ಧಿಸುತ್ತಿದ್ದರು ಮತ್ತು ಈ ಸಂಘ ಮುಂದಾಗುತ್ತಾ ಹೋಯಿತು. ಮತ್ತೊಂದೆಡೆ ಮುಸ್ಲಿಮರು ತಯಾರಿ ಮಾಡುತ್ತಿದ್ದರು.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಇಬ್ಬರು ಸಹಾಬಿಯರನ್ನು ಖುರೈಶಿನ ಸೈನ್ಯದ ಬಗ್ಗೆ ಮಾಹಿತಿ ಪಡೆಯಲಿಕ್ಕಾಗಿ ಕಳುಹಿಸಿದರು. ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಮುಸ್ಲಿಮರ ಸಂಖ್ಯೆ ಮತ್ತು ಶಕ್ತಿಯನ್ನು ಗೊತ್ತುಮಾಡಲಿಕ್ಕಾಗಿ ಮದೀನದ ಎಲ್ಲ ಮುಸ್ಲಿಮರ ಜನಗಣತಿ ನಡೆಸಿದರು. ಒಟ್ಟು 1500 ಮುಸ್ಲಿಮರು ಜೀವಿಸಿರುವರು ಎಂದು ಇದರಿಂದ ಗೊತ್ತಾಯಿತು.

ಆ ಸಮಯದ ಅವಸ್ಥೆ ಅನುಸಾರ ಅದನ್ನು ದೊಡ್ಡ ಸಂಖ್ಯೆಯಾಗಿ ಗಣಿಸಲಾಯಿತು. ಎಷ್ಟರ ವರೆಗೆ ಎಂದರೆ "ಈಗಲೂ ಯಾರದಾದರೂ ಭಯವಿರಬಹುದೇ?" ಎಂದು ಕೆಲವು ಸಹಾಬಿಯರು ಸಂತೋಷದ ಆವೇಶದಿಂದ ಹೇಳಿದರು.

ಉಹದ್ ಯುದ್ಧದ ತಯಾರಿ ನಡೆಯುತ್ತಿದ್ದಾಗ ಅದೇ ವೇಳೆ ಹಝ್ರತ್ ಪೈಗಂಬರ್(ಸ) ಹೇಳಿದರು: ರಾತ್ರಿ ನಾನೊಂದು ಕನಸನ್ನು ಕಂಡಿದ್ದೇನೆ. ಒಂದು ದನವನ್ನು ಕೊಯ್ಯಲಾಗುತ್ತದೆ ಮತ್ತು ನನ್ನ ಖಡ್ಗವಾದ ಝುಲ್‌ಫಿಕಾರ್‌ನ ಅಂಚಿನಲ್ಲಿ ಬಿರುಕು ಇರುವುದಾಗಿ ಕಂಡೆನು. ಅನಂತರ ಒಂದು ಸುದೃಢವಾದ ಯುದ್ಧವಸ್ತ್ರದಲ್ಲಿ ಕೈ ಹಾಕುವುದಾಗಿ ಕಂಡೆನು ಮತ್ತು ನಾನು ಒಂದು ಕುರಿಯ ಮೇಲೆ ಸವಾರನಾಗಿದ್ದೇನೆ. (ಇತರ ವರದಿಗಳಲ್ಲಿ ಖಡ್ಗದ ಹಿಡಿ ತುಂಡಾಗಿದ್ದಾಗಿ ಮತ್ತು ಹಿಡಿಯ ಬಳಿ ಬಿರುಕು ಇರುವುದರ ಪ್ರಸ್ತಾಪ ಸಹ ಇದೆ. ಒಂದು ಸುದೃಢವಾದ ಯುದ್ಧವಸ್ತ್ರವನ್ನು

ಧರಿಸಿದ್ದಾಗಿ ಕಂಡದ್ದರ ಪ್ರಸ್ತಾಪ ಮತ್ತೊಂದು ವರದಿಯಲ್ಲಿದೆ.) ಹರ್ಝ್ರತ್ ಪೈಗಂಬರ್(ಸ) ಈ ಕನಸನ್ನು ಹೀಗೆ ವ್ಯಾಖ್ಯಾನಿಸಿದರು: ದನಕ್ಕೆ ಸಂಬಂಧಿಸಿ ಹೇಳುವುದಾದರೆ, ನನ್ನ ಕೆಲವು ಸಹಾಬಿಯರು ಶಹೀದ್ ಆಗುವರು ಎಂಬುದನ್ನು ಅದು ಸೂಚಿಸುತ್ತದೆ. ನನ್ನ ಖಡ್ಗದ ಹಿಡಿ ಬಿರುಕು ಬಿಡುವುದಕ್ಕೆ ಸಂಬಂಧಿಸಿ ಹೇಳುವುದಾದರೆ, ನನ್ನ ಮನೆಯವರಲ್ಲಿ ಅಥವಾ ಕುಟುಂಬದವರಲ್ಲಿ ಯಾರಾದರೂ ವಧಿಸಲ್ಪಡುವವರು ಎಂಬುದನ್ನು ಅದು ಸೂಚಿಸುತ್ತದೆ. ಸುದೃಢವಾದ ಯುದ್ಧ ಅಂಗಿಯ ಅರ್ಥ ಮದೀನ ಆಗಿದೆ ಮತ್ತು ಕುರಿಯ ಮೇಲೆ ಸವಾರನಾಗುವುದರ ಅರ್ಥ ನಾನು ಶತ್ರುಗಳ ಬೆಂಬಲಿಗರನ್ನು ವಧಿಸುವೆನು ಎಂದಾಗಿದೆ. ಅಂತೂ ಹರ್ಝ್ರತ್ ಪೈಗಂಬರ್(ಸ) ಈ ಬಗ್ಗೆ ಸಲಹೆ ಕೇಳಿದರು ಮತ್ತು ಹೀಗೆ ಹೇಳಿದರು: ನೀವು ಅಭಿಪ್ರಾಯಪಡುವುದಾದರೆ ಮದೀನದಲ್ಲಿ ತಂಗಿ ಮಹಿಳೆಯರನ್ನು ಮತ್ತು ಮಕ್ಕಳನ್ನು ನಾವು ಕೋಟೆಗಳಿಗೆ ತಲುಪಿಸೋಣ. ಮದೀನ ಒಂದು ಕೋಟೆಯ ಹಾಗಿತ್ತು. ಹರ್ಝ್ರತ್ ಪೈಗಂಬರ್(ಸ) ನೀಡಿದ ಅದೇ ಅಭಿಪ್ರಾಯವೇ ಮುಹಾಜಿರ್ ಮತ್ತು ಅನ್ಸಾರರಾದ ಶ್ರೇಷ್ಠ ಸಹಾಬಿಯರ ಅಭಿಪ್ರಾಯವಾಗಿತ್ತು. ಆದರೆ ಬದ್ರ್ ಯುದ್ಧದಲ್ಲಿ ಭಾಗಿಯಾಗಿರದ ಮತ್ತು ತಮ್ಮ ಶಹಾದತ್ತಿನಿಂದ ಧರ್ಮದ ಸೇವೆಯ ಸದವಕಾಶವನ್ನು ಗಳಿಸುವ ತವಕದಲ್ಲಿದ್ದ ಮುಸ್ಲಿಂ ಯುವಕರ ಒಂದು ಸಂಘ ಹೀಗೆ ಒತ್ತಾಯಪಡಿಸುತ್ತಿದ್ದರು. ಶತ್ರುಗಳು ನಮ್ಮನ್ನು ಭೀರುಗಳು ಎಂದು ಭಾವಿಸದಿರಲು ನೀವು ನಮ್ಮನ್ನು ಮದೀನದಿಂದ ಹೊರಗೆ ಕೊಂಡು ಹೋಗಿರಿ.

ಹರ್ಝ್ರತ್ ಪೈಗಂಬರ್(ಸ) ಯುವಕರ ಸಲಹೆಯನ್ನು ಅಂಗೀಕರಿಸಿದರು ಮತ್ತು ತೆರೆದ ಮೈದಾನಕ್ಕೆ ಹೊರಟು ಸತ್ಯನಿಷೇಧಿಗಳೊಡನೆ ಸೆಣಸಾಡಲು ತೀರ್ಮಾನಿಸಿದರು. ಜುಮಾ ನಮಾಝ್ಹಿನ ನಂತರ ಹರ್ಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಸಾರ್ವಜನಿಕವಾಗಿ ಸಂಬೋಧಿಸುತ್ತಾ ಅಲ್ಲಾಹನ ಮಾರ್ಗದಲ್ಲಿ ಹೋರಾಡಲಿಕ್ಕಾಗಿ ಈ ಯುದ್ಧದಲ್ಲಿ ಭಾಗವಹಿಸಿಕೊಂಡು ಪುಣ್ಯವನ್ನು ಗಳಿಸಿರಿ ಎಂದು ಹೇಳಿದರು.

ಖುತ್ಬದ ಕೊನೆಯಲ್ಲಿ ಹುಝ್ಹೂರ್ ಹೇಳಿದರು: ಫೆಲಸ್ತೀನಿಯರಿಗಾಗಿ ದುಆಗಳನ್ನು ಮಾಡುತ್ತಿರಿ. ಯುದ್ಧವಿರಾಮದ ನಂತರ ಪುನಃ ಯಾವುದೇ ವ್ಯತ್ಯಾಸವಿಲ್ಲದೇ ಬಾಂಬ್‌ಗಳನ್ನು ವರ್ಷಿಸಲಾಗುವುದು ಮತ್ತು ಪುನಃ ಮುಗ್ಧರು ಶಹೀದಾಗುವರು. ಎಷ್ಟು ದೌರ್ಜನ್ಯ ನಡೆಯುವುದು ಎಂದು ಅಲ್ಲಾಹನೇ ಬಲ್ಲನು. ಅವರ ಭವಿಷ್ಯದ ಬಗ್ಗೆ ದೊಡ್ಡ ಶಕ್ತಿ ರಾಷ್ಟ್ರಗಳ ಉದ್ದೇಶಗಳು ಬಹಳ ಅಪಾಯಕಾರಿಯಾಗಿದೆ. ಆದ್ದರಿಂದ ಅವರಿಗಾಗಿ ಬಹಳ ದುಆಗಳ ಅಗತ್ಯವಿದೆ. ಅಲ್ಲಾಹನು ಕೃಪೆದೋರಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)
*At,* ***'Masjid Mubarak',*** *Islamabad, Tilford, UK.* On 01-12-2023
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian


***Email****: khutuba.kannada@gmail.com*


**You can find all the Sermons archived at**: www.alislam.org/friday-sermon